ಅನಂತಪದ್ಮನಾಭ ಎಚ್.ಎಮ್. ಬೆಂಗಳೂರು

ಹಕ್ಕಿಗೆ ಹಾರುವುದನ್ನು ಹೇಳಿಕೊಡಬೇಕಾಗಿಲ್ಲ. ಮೀನಿಗೆ ಈಜುವುದನ್ನು ಹೇಳಿಕೊಡಬೇಕಾಗಿಲ್ಲ. ಮನುಷ್ಯನಿಗೆ?



ಕೊರತೆ ಉಂಟಾದ ತಕ್ಷಣ ರಗಳೆ ಮಾಡುವುದನ್ನು.

ಪಿ. ಜಯವಂತ ಪೈ, ಕುಂದಾಪುರ

ಚಿತೆಗೂ ಚಿಂತೆಗೂ ವ್ಯತ್ಯಾಸವೇನು?

ಚಿಂತೆಯಿಂದ ಹೊರಬಾ ಎನ್ನುತ್ತಾರೆ; ಚಿತೆಯಿಂದ ಹೊರಬಂದರೆ ದೆವ್ವವೆಂದು ಹೊಡೆದು ಮಲಗಿಸುತ್ತಾರೆ.

ಮಲ್ಲಿಕಾರ್ಜುನ, ಸುರಧೇನುಪುರ

ಜನತೆಯನ್ನು ಮೆಚ್ಚಿಸಿದವರುಂಟು. ಹೆಂಡತಿಯನ್ನು ಮೆಚ್ಚಿಸಿದವರುಂಟೆ?

ಯಾರ ಹೆಂಡತಿಯನ್ನು? ಸ್ವಂತ ಹೆಂಡತಿಯನ್ನಾದರೆ ಪ್ರಯತ್ನವೇ ವ್ಯರ್ಥ.

ಜಯಶ್ರೀ, ಬೆಂಗಳೂರು

ಆರತಿಗೊಬ್ಬ ಮಗಳು, ಕೀರುತಿಗೊಬ್ಬ ಮಗ – ಈ ಮಾತು ಅದಲುಬದಲಾದರೆ?



ಮಗ ಅರ್ಚಕ, ಮಗಳು ಸಾಧಕಿ ಆಗಿರುತ್ತಾರೆ.

ಅನಸೂಯ ಟಿ. ಕೇದಿಗೆಮನೆ

ಎಲ್ಲಾ ವಿಷಯದಲ್ಲೂ ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳಲು ಸಾಧ್ಯವಿಲ್ಲ ಅಲ್ಲವೆ?

ನಿಜ. ಆತ್ಮಸಾಕ್ಷಿ ಅತ್ತೆಯೊಡನೆ ಹೊಂದಿಕೊ ಎನ್ನುತ್ತದೆ...

ಎಸ್.ಸಿ. ರಮೇಶ್, ಮೈಸೂರು

ತಿಳಿದು ಬದುಕುವವರಿಗಿಂತ ತುಳಿದು ಬದುಕಬೇಕೆಂಬುವರೆ ಹೆಚ್ಚಾಗಲು ಕಾರಣ?

'ಹಿಂದುಳಿದವರೆಂದು ಘೋಷಿಸಿ' ಎನ್ನುತ್ತಾ 'ತುಳಿತಭಾಗ್ಯ'ವನ್ನು ಬೇಡುವ ಪಡೆ.

ಮಂಡಿ ಕುಮಾರ್, ಬೆಂಗಳೂರು

ಮದುವೆಯ ಮೊದಲು ಜಾತಕ. ನಂತರ?

ಜಾತಕರ್ಮ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ದೇವರು ಮನುಷ್ಯನನ್ನು ಸೃಷ್ಟಿಸಿದನೋ, ಮನುಷ್ಯನೇ ದೇವರನ್ನು ಸೃಷ್ಟಿಸಿದನೋ?

ಮನುಷ್ಯನಲ್ಲಿನ ಭಯವು ದೇವರ ಕಲ್ಪನೆಯನ್ನು ಸೃಷ್ಟಿಸಿತು.

ಸುಧೀಂದ್ರ, ಬೆಂಗಳೂರು

ಏನ್ ಜನ ರೀ... ವಾಕಿಂಗ್ ಹೋಗ್ತಿದ್ದೀನಿ ಅಂದ್ರೂ 'ಡ್ರಾಪ್ ಕೊಡ್ತೀನಿ ಬನ್ನಿ' ಅಂತಾರಲ್ಲ...?

ನಿಮ್ಮ ಬೆವೆತ, ಸೋತ ಮುಖ 'ಆಂಬುಲೆನ್ಸ್ ಯೋಗ್ಯ' ಎನಿಸಿ ಹಾಗೆ ಹೇಳಿದ್ದಂತೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಸನ್ಯಾಸ ಪಡೆಯೋದು ಅಂದರೆ ಕಟ್ಟಿಕೊಂಡ ಸಂಸಾರ ಬಿಡೋದಾ ಅಥವಾ ಸಂಸಾರ ಕಟ್ಟಿಕೊಳ್ಳದೆ ಇರೋದಾ?

ಎಂಎನ್‌ಸಿ ಕಂಪನಿಯ ಉದ್ಯೋಗಿಯಂತೆ ಕಟ್ಟಿಕೊಂಡಿದ್ದೂ ವ್ಯಾಮೋಹ ತೊರೆದು ಜೀವಿಸುವುದು.

ಸುಂದರ್ ಜಿ.ಕೆ. ಮಂಗಳೂರು

ಮದುವೆ ಎಂಬ ಬಂಧನವಿಲ್ಲದ ಬದುಕು ಚೆನ್ನಾಗಿ ಇರುತ್ತದೆಯೆ?

ಛಿ! ಸಾಂಗತ್ಯ, ಭಾಮಿನಿಷಟ್ಪದಿ, ರಗಳೆಗಳಿಲ್ಲದ ಬದುಕು Blank, Worse.

ವಿ.ಹೇಮಂತಕುಮಾರ್, ಬೆಂಗಳೂರು

ಜಗತ್ತಿನಲ್ಲಿರುವ ಎಲ್ಲಾ ವೃದ್ಧಾಶ್ರಮಗಳಿಗೆ ಬೀಗ ಹಾಕಲು ಸಾಧ್ಯವಿಲ್ಲವೆ?

ಅದಕ್ಕೆ ಮುಂಚೆ ಮಗ–ಸೊಸೆ, ಮಗಳು–ಅಳಿಯರ ಮನಸ್ಸಿನ ಬೀಗ ತೆಗೆದರೆ ಮಾತ್ರ.

ಬಿ.ಚಂದ್ರೇಗೌಡ, ಬೆಂಗಳೂರು

ಮಾನವನ ಬದುಕಿನಲ್ಲಿ ಸಂಕಲನ ಮತ್ತು ವ್ಯವಕಲನದ ಪಾತ್ರ ಹೇಗಿರಬೇಕು?

ಅರಿಗಳ ವ್ಯವಕಲನ, ಅರಿತವರ ಸಂಕಲನ ಇರಬೇಕು.

## ವಾರದ ಪ್ರಶ್ನೆ

ಜಗದೀಶ ಬಿ. ಹೊಸೂರು, ಮೈಸೂರು

ದೋಸೆ–ವಡೆ ಎಂಬ ಕನ್ನಡ ಪದಗಳೇಕೆ ದೋಸಾವಡಾ ಎಂದು ಬದಲಾಗಿವೆ?

ಅನ್ಯಭಾಷಿಗರ ಪ್ರಭಾವದಿಂದ ಕನ್ನಡಭಾಷೆಯಲ್ಲಿ ದೋಷ ಒಡೆದು ಕಾಣುವುದರಿಂದ.

ನಾರಾಯಣ ಯಾಜಿ, ಶಿರಾಲಿ

ರಾಮ್ ಅವರೇ, ಹೇಗಿದ್ದೀರಿ?

ಏಕಿದ್ದೀರಿ ಎನ್ನುವವರಿಗೆ ಹೊಟ್ಟೆ ಉರಿಯುವಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ತಮ್ಮ ಉತ್ತರಗಳನ್ನು ಮರುಪ್ರಶ್ನಿಸಬಹುದೆ?

ಹೆಂಡತಿಯ ಉತ್ತರದ ಹೊರತಾಗಿ ಮಿಕ್ಕೆಲ್ಲವನ್ನೂ ಮರುಪ್ರಶ್ನಿಸಿದರೆ ಅಪಾಯವಿಲ್ಲ.

ಬೂಕನಕೆರೆ ವಿಜೇಂದ್ರ, ಮೈಸೂರು

ಕೆಲವರು ಪ್ರಾಣಿಗಳನ್ನು ಪ್ರೀತಿಸುವಷ್ಟು ತಮ್ಮ ತಂದೆತಾಯಿಯರನ್ನು ಪ್ರೀತಿಸುವುದಿಲ್ಲವಲ್ಲ...?



ಇವರದು ಪ್ರಾಣಿಗುಣ. ಯಾವ ಪ್ರಾಣಿಯೂ ತನ್ನ ತಂದೆತಾಯಿಯನ್ನು ನೋಡಿಕೊಳ್ಳುವುದಿಲ್ಲ.

ವಿಜಯ್ ಹೆಮ್ಮಿಗೆ, ಮೈಸೂರು

ಮನುಷ್ಯರಿಗೆ ದಿನಕ್ಕಿಷ್ಟೇ ಟಾಕ್‌ಟೈಂ ಅಂತಿದ್ದು, ಹೆಚ್ಚಿನ ಮಾತುಕತೆಗೆ ರಿಚಾರ್ಜ್ ಎನ್ನುವಂತಿದ್ದಿದ್ದರೆ?

ಮೂತಿಯನ್ನು ಇಮೋಜಿಯಂತೆ ತಿರುಗಿಸುತ್ತಾ ಸನ್ನೆಯಲ್ಲೇ ಸಂಭಾಷಿಸುವುದು ಹೆಚ್ಚುತ್ತಿತ್ತು.

ಟಿ. ಜಾಗೃತ, ತುಮಕೂರು

ಶಾಲಾ ಪಠ್ಯದಲ್ಲಿ ನೀತಿ ಶಿಕ್ಷಣಕ್ಕೆ ತಿಲಾಂಜಲಿ ಇತ್ತಿದ್ದಾರೆ. ಏಕೆ?

ಇಂದಿನ ಶಿಕ್ಷಣಕ್ಕೂ ನೀತಿಗೂ ಸಂಬಂಧವಿಲ್ಲ ಎಂಬ ಅಭಿಪ್ರಾಯವಂತೆ.

■ ರಾಮ್